

# ಒಣ ಬೇಸಾಯದಲ್ಲಿ ಹಿಪ್ಪುನೇರಳೆ ಮರಗಳಿಂದ ಬದುಕುಕಟ್ಟಿಕೊಂಡ

## ಟಿ. ನಾರಾಯಣಪ್ಪ



**ರೇಷ್ಮೆ** ಕೃಷಿಯನ್ನು ಕೋಲಾರ ಚಿನ್ನ ಎಂದು ಕರೆಯುತ್ತಿದ್ದ ಈ ಜಿಲ್ಲೆಯವರು ನೀರಿಲ್ಲದೆ, ಮಳೆಯಿಲ್ಲದೆ ಮತ್ತು ಕೆರೆ–ಕಟ್ಟೆಯಲ್ಲಿ ನೀರಿಲ್ಲದೆ ಬರಗಾಲವನ್ನು ಅಪ್ಪಿಕೊಂಡು ಜೀವನ ಸಾಗಿಸುತ್ತಿರುವ ಲಕ್ಷಾಂತರ ಕುಟುಂಬಗಳು ಈಗ ತಮ್ಮದೇ ಆದ ಸ್ವಂತಿಕೆಯಿಂದ ಬೋರ್‌ವೆಲ್ ಹಾಕಿಸಿ, ನೀರು ಬರದೇ ಇದ್ದಾಗ ಧೃತಿಗೆಡದ ರೇಷ್ಮೆ ಬೆಳೆಗಾರರು ಒಣಬೆಸಾಯದಲ್ಲಿ ರೇಷ್ಮೆ ಕೃಷಿಯನ್ನು ಸಾವಯವ ಕೃಷಿಯಲ್ಲಿ ಮಾಡಲು ಪ್ರಯತ್ನ ಪಡುತ್ತಿರುವುದು ಇತ್ತೀಚಿನ ಬೆಳವಣಿಗೆಯಲ್ಲಿ ಹೊಸ ಆವಿಷ್ಕಾರವಾಗಿದೆ.

ವಕ್ಕಲೇರಿ ಹೋಬಳಿಯ ಪಾರ್ಶ್ವಗಾನಹಳ್ಳಿ ಗ್ರಾಮದ ರೈತರಾದ ಟಿ. ನಾರಾಯಣಪ್ಪ ಬಿನ್ ತಮ್ಮಪ್ಪ ಇವರು ತಮ್ಮ ಜಮೀನಿನಲ್ಲಿ 10 ಬೋರ್‌ವೆಲ್ ಕೊರೆಸಿದರೂ ಸಹ ನೀರು ಬರದೇ ಇದ್ದಾಗ ಶ್ರೀ ಕೆ.ಆರ್. ಹುಲ್ಲುನಾಚೇಗೌಡರವರ ಮಾರ್ಗದರ್ಶನದಲ್ಲಿ ಹಿಪ್ಪುನೇರಳೆ ಗಿಡವನ್ನು ಮರವಾಗಿ ಬೆಳೆದು **"ಕೋಲಾರ ಟ್ರೀ ಮಲ್‌ಬರಿ ಸಿಸ್ಟಂ"**ಅನ್ನು ಟ್ರೆಚಿಂಗ್ ಮತ್ತು ಮಲ್ಚಿಂಗ್ ವಿಧಾನದಲ್ಲಿ ಹಸಿರೆಲೆ ಗೊಬ್ಬರ ಮತ್ತು ಕೊಟ್ಟಿಗೆ ಗೊಬ್ಬರ ಯಥೇಚ್ಛವಾಗಿ ಬಳಸಿ ಹಾಗೂ **ಡಾ.ಸಾಯಿಲ್** ಸಾವಯವ ಗೊಬ್ಬರ ಬಳಸಿ. ಹಿಪ್ಪುನೇರಳೆ ಗುಣಮಟ್ಟವನ್ನು ಹೆಚ್ಚಿಸಿ ಅಧಿಕ ಗೂಡಿನ ಇಳುವರಿ ಮತ್ತು ಸಿ.ಎಸ್.ಅರ್. ದ್ವಿತಳಿ ಸಂಕರಣ (ಡಬಲ್ ಹೈಬ್ರಿಡ್) ಗೂಡನ್ನು ಚೆನ್ನಾಗಿ ಬೆಳೆಯುತ್ತಿದ್ದಾರೆ.



ಈ ವರ್ಷದಲ್ಲಿ ನಮ್ಮ ರಾಜ್ಯದ 10 ಜಿಲ್ಲೆಗಳ ( ಬಳ್ಳಾರಿ, ತುಮಕೂರು, ಮಂಡ್ಯ, ರಾಮನಗರ, ಬೆಂಗಳೂರು ಗ್ರಾಮಂತರ, ರಾಯಚೂರು, ಬಾಗಲಕೋಟೆ, ಬೀದರ್, ಚಿಕ್ಕಬಳ್ಳಾಪುರ ಮತ್ತು ಮೈಸೂರು ) ರೈತರು ಮತ್ತು ರೇಷ್ಮೆ ಇಲಾಖೆಯ ಸಿಬ್ಬಂದಿವರ್ಗ ಹಾಗು ಅಧಿಕಾರಿ ವರ್ಗದವರೂ ಬಸ್ ಮಾಡಿಕೊಂಡು ಬಂದು ಸದರಿ ರೈತರ ತೋಟಗಳನ್ನು ತೋರಿಸುತ್ತಿದ್ದಾರೆ.

ಶ್ರೀ ಟಿ. ನಾರಾಯಣಪ ಎಂಬ ರೈತರು ಈ ಮರಗಡ್ಡಿ ತೋಟದಲ್ಲಿ ಸಿ.ಎಸ್.ಅರ್. 'ಶುದ್ದತಳ" (ಸಿ.ಎಸ್.ಅರ್.2)ಗೂಡನ್ನು ಮತ್ತು ಸಂಕರಣ ಹೈಬ್ರಿಡ್ ಗೂಡನ್ನು ವರ್ಷದಲಿ ಐದು ಬೆಳೆಗಳನ್ನು ಬೆಳೆದಿರುತ್ತಾರೆ.

ಈ ತಿಂಗಳಲ್ಲಿ ಈ ರೈತರು ತಂಡದ ಸಂಖ್ಯೆ : 32. ( ಎನ್. ಎಸ್. ಎಸ್. ಓ ) ಬೆಂಗಳೂರಿನಿಂದ ನೂರು ಮೊಟ್ಟೆಗಳನ್ನು ತಂದು (ಸಿ.ಅರ್.ಎಸ್. ಯಿಂದ ಚಾಕಿ ಮಾಡಿಸಲಾಗಿರುವ) ಸಾಕಣಿಕೆ ಮಾಡಿ 100 ಮೊಟ್ಟೆಗೆ 109 ಕೆ.ಜಿ.ಯಷ್ಟು ಗೂಡನ್ನು ಬೆಳೆದು ಕೋಲಾರ ಸರ್ಕಾರಿ ರೆಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ಒಂದು ಕೆ.ಜಿ.ಗೆ ರೂ.386/– ದರ ಸಿಕ್ಕಿದ್ದು, ಒಟ್ಟು ರೂ.42,074/–ಗಳು ಬಂದಿರುತ್ತದೆ. ಜೊತೆಗೆ ಒಂದು ಕೆ.ಜಿ.ಗೂಡಿಗೆ ರೇಷ್ಮೆ ಇಲಾಖೆಯಿಂದ ರೂ.50/– ಪ್ರೋತ್ಸಾಹಧನ ನೀಡಲಾಗುತ್ತದೆ. ಒಟ್ಟು ಒಂದು ಕೆ.ಜಿ.ಗೆ ಗೂಡಿನ ಧರ ರೂ.436/– ಆಗುತ್ತದೆ.

ಇದರ ವೈಶಿಷ್ಟತೆ ಅಂದರೆ ಸಾವಯವ ಕೃಷಿ ಪದ್ಧತಿ. 10 ರಿಂದ 15 ಗ್ರಾಂ ತೂಗುವ ಉತ್ತಮ ಗುಣಮಟ್ಟದ ಒಂದು ಹಿಪ್ಪುನೇರಳ ಎಲೆ, ಮರಗಳ ಅಂತರ (10*10) ವಿದ್ದು, ಯಾವುದೇ ಕೂಲಿ ಕಾರ್ಮಿಕರ ಬಳಕೆ ಇಲ್ಲದೆ ರೈತ ದಂಪತಿಗಳಿಬ್ಬರೇ ಸಾಕಾಣಿಕೆ ಮಾಡುತ್ತಾರೆ.

ಒಂದು ರೂಪಾಯಿ ಕೂಲಿ ಖರ್ಚಿಲ್ಲದೇ ಇಲಾಖೆಯ ನೂತನ ತಾಂತ್ರಿಕತೆಯನ್ನು ಬಳಸಿಕೊಂಡು ರೇಷ್ಮೆ ಉಪನಿರ್ದೇಶಕರಾದ ಶ್ರೀ.ಎಸ್.ವಿ.ಕುಮಾರ್,ರೇಷ್ಮೆ ಸಹಾಯಕ ನಿರ್ದೇಶಕರಾದ ಶ್ರೀ ಬಿ.ಎಲ್.ಕೃಷ್ಣಪ್ಪ ವಿಸ್ತರಧಿಕಾರಿಗಳಾದ ಶ್ರೀ.ಎಂ.ಎಸ್.ಕಲ್ಯಾಣ್‌ಸ್ವಾಮಿ ಮತ್ತು ರೇಷ್ಮೆ ನಿರೀಕ್ಷಕರಾದ ಶ್ರೀ.ಎನ್.ಚಂದ್ರಶೇಖರಗೌಡರವರುಗಳ ಮಾರ್ಗ ದರ್ಶನದಲ್ಲಿ ಪ್ರತಿ ಹಂತದ ತಾಂತ್ರಿಕತೆಯನ್ನು ಅಳವಡಿಸಿಕೊಂಡು ಪ್ರತಿಯೊಬ್ಬ ರೈತರು ಯಶಸ್ವಿ ರೇಷ್ಮೆ ಬೆಳೆಗಾರರು ಆಗುತ್ತಿದ್ದಾರೆ. ಹಾಗು ಸುತ್ತ – ಮುತ್ತಲಿನ ರೈತರಿಗೆ ಆದರ್ಶ ರೈತರಾಗಿ ರೇಷ್ಮೆ ಇಲಾಖೆಯ ಅಧಿಕಾರಿವರ್ಗದವರ ಸಹಕಾರದೊಂದಿಗೆ ವಿಸ್ತರಣೆ ಪ್ರಚಾರ ನೀಡುತ್ತಿರುವುದು ತುಂಬಾ ಹೆಮ್ಮೆಯ ವಿಷಯವಾಹಿದೆ.

  

 

ರೆಷ್ಮೆ ಇಲಾಖೆಯ ನೂತನ ತಾಂತ್ರಿಕತೆಯನ್ನು ಅಳವಡಿಸಿಕೊಂಡು ಒಂದು ಎಕರೆ ಹಿಪ್ಪುನೇರಳೆ ತೋಟದಲ್ಲಿ 430 ಹಿಪ್ಪುನೇರಳೆ ಮರಗಳಿದ್ದು , ವರ್ಷವೊಂದಕ್ಕೆ ಐದು ಬೆಳೆಯನ್ನು ಬೆಳೆದು ಖರ್ಚು ಕಳೆದು ಕನಿಷ್ಟ ಸುಮಾರು 3ಲಕ್ಷ ರೂಪಾಯಿಗಳ ಹಣ ಸಂಪಾದನೆ ಆಗುತ್ತದೆಂದು ರೈತರು ಹೆಮ್ಮೆಯಿಂದ ಹೇಳುತ್ತಾರೆ. ಮತ್ತು ಒಂದು ಮರದಿಂದ ಒಂದು ವರ್ಷಕ್ಕೆ ರೂ.700/– ರಿಂದ ರೂ.800/–ಗಳ ಆದಾಯ ಗಳಿಸಬಹುದೆಂದು ನಾರಾಯಣಪ್ಪ ಎಂಬ ರೈತರು ಸಂತೋಷದಿಂದ ಎಲ್ಲಾ ರೈತರಿಗೂ ಹೇಳುತ್ತಿದ್ದಾರೆ.





